ಆ) ಹಾಗಿದ್ದಲ್ಲಿ, ಅವುಗಳನ್ನು ಕೆಡವಿ ಬದಲೀ ಸೇತುವೆಗಳನ್ನು ಯಾವಾಗ ನಿರ್ಮಾಣ ಮಾಡಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತಿಳಿದಿದೆ.

ಆ) ಈ ಕಾಮಗಾರಿಗಳ ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು, ಆಯವ್ಯಯದಲ್ಲಿ ಅಥವಾ ಯಾವುದಾದರೂ ಯೋಜನೆಯಡಿ ಸೇರಿಸಿ ಮಂಜೂರಾದೊಡನೆ ಮತ್ತು ಅನುದಾನದ ಹಣವು ಲಭ್ಯವಾದ ಕೂಡಲೇ ಪುನರ್ ನಿರ್ಮಾಣ ಕೆಲಸವನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ.

ವಿಷಯ : ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತದಲ್ಲಿ ಬೀದಿ ದೀಪ

Q : 439

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ಬೀದಿ ದೀಪ ಹಾಕಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಹಣ ತುಂಬಿರುವುದು?

ಆ) ಮೆಲ್ಕಂಡ ಕೆಲಸಕ್ಕೆ ತುಂಬಿ ಎಷ್ಟು ದಿವಸವಾಯಿತು?

ಇ) ಮೇಲ್ಕಂಡ ಬಡಾವಣೆಗಳಿಗೆ ಬೀದಿ ದೀಪ ಹಾಕಲಾಗಿದೆಯೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮಹಾಲಕ್ಷ್ಮಿ ಲೇಔಟ್ ಎರಡನೆಯ ಹಂತಕ್ಕೆ ರೂ. 3,83,970 ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ರೂ. 48,80,720 ಹಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಂಡಳಿಗೆ ಸಹಾಯ ಮಾಡಿದೆ.

ಆ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಸುಮಾರು ಎರಡು ವರ್ಷ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಕೇವಲ ಒಂದು ತಿಂಗಳು ಸಂದಿದೆ.

ಇ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಲೈನ್ ಕೆಲಸಗಳು ಮುಗಿದಿದ್ದು ಸದ್ಯದಲ್ಲೇ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ನ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಆದಷ್ಟು ಜಾಗ್ರತೆ ಕೆಲಸವನ್ನು ಮುಗಿಸಲಾಗುವುದು.

ವಿಷಯ : ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳಿಂದ ಬರುವ ವರಮಾನ.

Q : 171

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ